# IN THE COURT OF THE ADDL. SENIOR CIVIL JUDGE & JMFC., GUBBI
**OS – 210/2023**

Witness present and duly sworn on : 28.11.2024.

Cross Examination: by Counsel for Defendant No.1 to 8. :

ನನಗೆ ಈಗ 21 ವರ್ಷ ವಯಸ್ಸು. ದಾವೆಯನ್ನು Declaration of title by way of adverse possession and permanent injunction n ಕೋರಿ ಸಲ್ಲಿಸಿರುತ್ತೇನೆ. ದಾವೆ ಹಾಕುವ 25 ವರ್ಷದ ಮುಂಚಿತವಾಗಿ ದಾಖಲೆಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ತಾಯಿಯಿಂದ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ತಾಯಿಗೆ ಜ್ಞಾಪಕ ಶಕ್ತಿ ತೊಂದರೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಾನಸಿಕವಾಗಿ ತೊಂದರೆ ಇದ್ದು, ಸರಿಯಾಗಿ ಓಡಾಡಲು ಕಷ್ಟ ಆಗುತ್ತದೆ. ನನ್ನ ತಂದೆ ತಾಯಿ ಅನಕ್ಷರಸ್ಥರು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದ ಮಾಹಿತಿ ನನಗೆ ಇದೆ. ನನ್ನ ತಂದೆ ತಾಯಿಗೆ ಸಂಪೂರ್ಣವಾಗಿ ಆರೋಗ್ಯವಾಗಿ ಇದ್ದಾರೆ. ನನ್ನ ತಂದೆ ತಾಯಿಗೆ ಜ್ಞಾಪಕ ಶಕ್ತಿ ಚೆನ್ನಾಗಿ ಇದೆ ಎಂದರೆ ಸ್ವಲ್ಪ ಸ್ವಲ್ಪ ಇದೆ. ನನ್ನ ತಂದೆ ತಾಯಿ ಈ ದಾವೆಗೆ ಸಂಭಂದಿಸಿದಂತೆ ನ್ಯಾಯಾಲಯಕ್ಕೆ ಬರುತ್ತಿದ್ದಾರಾ ಎಂದರೆ ಮೊದಲು ಬರುತ್ತಿದ್ದರು. ಓಡಾಡಲು ತೊಂದರೆ ಇರುವ ಕಾರಣ ಈಗ ಬರುತ್ತಿಲ್ಲ. ದಾವಾ ಹಾಕುವ ಸಮಯಕ್ಕೆ ನನ್ನ ತಂದೆ ತಾಯಿ ವಕೀಲರಿಗೆ ಮಾಹಿತಿ ಕೊಟ್ಟಿರುತ್ತಾರೆ ಮತ್ತು ನಾನು ಕೊಟ್ಟಿರುತ್ತೇನೆ. ನನ್ನ ತಂದೆ ತಾಯಿಗೆ ಈ ದಾವೆಯನ್ನು ಹಾಕಿರುವ ಬಗ್ಗೆ ಗೊತ್ತಿದೆ ಎಂದರೆ ಸರಿ. ನನ್ನ ತಂದೆ ತಾಯಿಗೆ ದಾವೆಯ ಸತ್ಯದ ಘಟನೆಗಳ ಬಗ್ಗೆ ಗೊತ್ತಿದೆ ಎಂದರೆ ಸರಿ. ಈ ದಾವೆಯನ್ನು ಹಾಕುವ ಮೊದಲು ದಾವಾ ಆಸ್ತಿಯ ಸಂಪೂರ್ಣ ಇತಿಹಾಸ ನನ್ನ ತಂದೆ ತಾಯಿಗೆ ಗೊತ್ತಿದೆ ಎಂದರೆ ಸರಿ. ನನ್ನ ತಂದೆ ತಾಯಿಗೆ ಗೊತ್ತಿರುವಂತಹ ಸತ್ಯಾಂಶಗಳನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನನ್ನ ಅನುಭವದ ಮೇಲೆ ಬರೆಸಿರುತ್ತೇನೆಂದರೆ ಸರಿಯಲ್ಲ. ನಾನು ಪಿ.ಯು.ಸಿ ಓದಿದ್ದೇನೆ. ನನಗೆ ಕನ್ನಡ ಚೆನ್ನಾಗಿ ಓದಲು ಬರುತ್ತದೆ. ನನ್ನ ತಂದೆ ತಾಯಿ ಈ ದಾವೆಯನ್ನು ಮಾಲೀಕರೆಂದು

ಘೋಷಣೆ ಮಾಡಲು ಸಲ್ಲಿಸಿರುತ್ತಾರೆ. ಈ ದಾವೆಯ ಎದುರುದಾರರು ತಕರಾರಿನಲ್ಲಿ ದಾವಾ ಆಸ್ತಿಯು ಅವರ ಆಸ್ತಿಯಾಗಿದ್ದು, ಅದನ್ನು ಬಾಡಿಗೆಗೆ ಕೊಟ್ಟಿರುವ ಬಗ್ಗೆ ಹೇಳಿರುತ್ತಾರೆ. ಸಾಕ್ಷಿ ಮುಂದುವರೆದು ಬಾಡಿಗೆಗೆ ಕೊಟ್ಟಿರುವುದಿಲ್ಲ.

1968 ರಲ್ಲಿ ಅಮೀರ್ ಖಾನ್ ರವರಿಂದ ಮೊಹಮ್ಮದ್ ಅಯಾದ್ ಸಾಬ್ ರವರು ರೂ.100/- ಎರಡು ಗುಂಟೆ ಜಮೀನನ್ನು ಖರೀದಿ ಮಾಡಿ ಮನೆ ಕಟ್ಟಿರುತ್ತಾರೆ. 1970 ರಲ್ಲಿ ನನ್ನ ಮುತ್ತಜ್ಜಿ ಭದ್ರಮ್ಮ ಕೋ ಚಿಕ್ಕನರಸಯ್ಯ ರವರು ರೂ.90/- ಕಪ್ಪು ಹಂಚಿನ ಮನೆಯನ್ನು ಮತ್ತು ಹಿತ್ತಲಿನ ಜಾಗವನ್ನು ಖರೀದಿ ಮಾಡಿರುತ್ತಾರೆ. ಖರೀದಿಯನ್ನು ತೋರಿಸಲು ನಾನು ನೊಂದಾಯಿತ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಕಪ್ಪು ಹಂಚಿನ ಮನೆಯನ್ನು ಕಿತ್ತು ಹಾಕಿ ಕೆಂಪು ಹಂಚಿನ ಮನೆಯನ್ನು ಕುಟ್ಟುವಾಗ ಖರೀದಿ ಪತ್ರ ಕಳೆದುಹೋಗಿರುತ್ತದೆ. ದಾಖಲೆಯು ನೊಂದಣಿಯಾಗಿರುವುದಿಲ್ಲ.

ಹೆರೂರು ಗ್ರಾಮ ಪಂಚಾಯ್ತಿಯಲ್ಲಿ ಸರ್ವೆ ನಂ.43/2 ಎ ರಲ್ಲಿ 2 ಗುಂಟೆ ಜಮೀನಿಗೆ ಖಾತೆ ನಂ.182/191 ಮತ್ತು 182/191/1. ಅದನ್ನು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಮ್ಮ ಮುತ್ತಜ್ಜಿಯಿಂದ ಪೌತಿ ವಾರಸು ಆಧಾರದ ಮೇಲೆ ಭದ್ರಯ್ಯ ಮತ್ತು ಲಕ್ಷ್ಮಮ್ಮ ನವರ ಹೆಸರಿಗೆ ಬಂದಿರುತ್ತದೆ. ಸಾಕ್ಷಿ ಮುಂದುವರೆದು ಮನೆ ಭದ್ರಯ್ಯನವರ ಹೆಸರಿಗೆ ಮತ್ತು ಹಿತ್ತಲಿನ ಜಾಗ ಲಕ್ಷ್ಮಮ್ಮನವರ ಹೆಸರಿಗೆ ಬದಲಾವಣೆಯಾಗಿರುತ್ತದೆ. ಹಿತ್ತಲಿನ ಲಕ್ಷ್ಮಮ್ಮನವರ ಹೆಸರಿಗೆ ಬದಲಾವಣೆ ಆಗಿರುವ ವಿಸ್ತೀರ್ಣ 40X20. ಭದ್ರಯ್ಯನವರಿಗೆ ಎ.ಸಿ ಶೀಟಿನ ಮನೆ ವಿಸ್ತೀರ್ಣ 40X41 ರಲ್ಲಿ 40X17. ಸದರಿ ಖಾತೆಯ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.43/2 ಎ ಗ್ರಾಮ ಪಂಚಾಯ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಕಂದಾಯ ದಾಖಲೆಗಳಿಗೆ ಸಂಭಂದಿಸಿದೆ ಎಂದರೆ ಇರಬಹುದು. ಭದ್ರಯ್ಯ ಮತ್ತು ಲಕ್ಷ್ಮಮ್ಮನವರಿಗೆ ಕಂದಾಯ ದಾಖಲೆಗಳು ಸಂಭಂದಪಟ್ಟಿದ್ದು, ಅವರ ಹೆಸರಿಗೆ ಪಂಚಾಯ್ತಿ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಆಸ್ತಿಗೆ ಸಂಭಂದಪಟ್ಟಿರುವ ದಾಖಲೆಗಳನ್ನು ದಾವಾ ಆಸ್ತಿಗೆ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ 2 ಗುಂಟೆಗೆ ಮಾತ್ರ ಖಾತೆ ಆಗಿರುತ್ತದೆ. ಖಾತೆ ನಂ.182/191 ಮತ್ತು 182/191/1 ರ ಒಟ್ಟು ವಿಸ್ತೀರ್ಣ ನನಗೆ ಚದುರ ಅಡಿಯಲ್ಲಿ ಹೇಳಲು ಬರುವುದಿಲ್ಲ. ಸದರಿ ಖಾತೆ ನಂಬರ್ ಆಸ್ತಿಯ ಚದರ

ಅಡಿ ವಿಸ್ತೀರ್ಣ 3120 ಚದರ ಅಡಿ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 40X61. ನಾನು ಹೇಳಿರುವ ವಿಸ್ತೀರ್ಣ 3 ಗುಂಟೆಯ ಖಾತೆ ಎಂದರೆ 2 ಗುಂಟೆಯ ಖಾತೆ. ಎರಡು ಖಾತೆ ಸೇರಿ 2400 ಚದರ ಅಡಿ ಇದೆ ಎಂದು ಸುಳ್ಳು ಬರೆಸಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪೂರ್ವಕ್ಕೆ ಚಂದ್ರ ಬಿನ್ ಚಂದ್ರಯ್ಯ ಎಂದು ಬರೆಸಿಲ್ಲ, ಅವರು ಸ್ವಾಧೀನದಲ್ಲಿ ಇರವುದಿಲ್ಲ. ನಾನು ಸದರಿ ಚಂದ್ರ ಬಿನ್ ಚಂದ್ರಯ್ಯನವರ ದಾಖಲೆಯನ್ನು ನೋಡಿಲ್ಲ. ದಕ್ಷಿಣಕ್ಕೆ ಮಂಗಳಮ್ಮ ಬಿನ್ ನಂಜಮ್ಮ. ಅವರು ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ. ಮಂಗಳಮ್ಮ ರವರು ಅವರ ಆಸ್ತಿಯ ಮಾಲೀಕರು. ಉತ್ತರಕ್ಕೆ ಬಿ.ಹೆಚ್ ರಸ್ತೆ ಬರುತ್ತದೆ. ಸದರಿ ರಸ್ತೆ ದಾವಾ ಆಸ್ತಿಗೆ ಸೇರಿಕೊಂಡು ಇದೆ. ಚಕ್ಕುಬಂದಿಯ ಸ್ವಾಧೀನವನ್ನು ವಾಡಿಕೆಯಂತೆ ಅಂದರೆ ಸಾಮಾನ್ಯವಾಗಿ ಮಾಲೀಕತ್ವ ವಿಷಯವನ್ನು ತಿಳಿಯದೆ ಬರೆಸಿದ್ದೇನೆಂದರೆ ಸರಿ. ಸಾಕ್ಷಿ ಮುಂದುವರೆದು ಮಾಲೀಕತ್ವ ತಿಳಿದುಕೊಂಡು ದಾವಾ ಆಸ್ತಿಯ ಚಕ್ಕುಬಂದಿ ನಮೂದು ಮಾಡಿದ್ದೇವೆ.

ನೊಂದಣಿ ಸಂಖ್ಯೆ 1601/1968 ರಿಂದ 69 ನಿರ್ವಾಹಣಾ ಜಾರಿ ದಿನಾಂಕಃ 09.07.1968 ರಂತೆ G U Mohammed Hayatha Sab ರವರಿಗೆ 2 ಗುಂಟೆ ಖಾತೆ ಆಗಿರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಖಾತೆಯನ್ನು ಮಾಡದೆ ಇರುವ ಬಗ್ಗೆ ದಾಖಲೆಯನ್ನು ಮುಚ್ಚಿಟ್ಟಿರುತ್ತೇನೆಂದರೆ ಸರಿಯಲ್ಲ. G U Mohammed Hayatha Sab ರವರು ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಖರೀದಿ ಮಾಡಿರುತ್ತೇವೆ. ಸದರಿ ದಾಖಲೆಗಳನ್ನು ಮುಚ್ಚಿಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. G U Mohammed Hayatha Sab ರವರಿಗೆ ಇದ್ದ 2 ಗುಂಟೆಯ ಕಂದಾಯ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. G U Mohammed Hayatha Sab ರವರಿಗೆ ಸಂಭಂದ ಪಟ್ಟಿರುವ ಗ್ರಾಮ ಪಂಚಾಯ್ತಿ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ. ಗ್ರಾಮ ಪಂಚಾಯ್ತಿ ಖಾತೆ ನನ್ನ ಮುತ್ತಜ್ಜಿ ಹೆಸರಿಗೆ 1995-96 ರಲ್ಲಿ ಆಗಿರುತ್ತದೆ. ನನ್ನ ಮುತ್ತಜ್ಜಿ ಖರೀದಿ ಮಾಡಿದ್ದ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ದಾವಾ ಆಸ್ತಿಗೆ ಬರುವಾಗ ಕಪ್ಪು ಹಂಚಿನ ಮನೆ ಮತ್ತು ಹಿತ್ತಲಿನ ಜಾಗ ಇರುತ್ತದೆ. ನಾವು ಸದರಿ ಜಾಗಕ್ಕೆ

ಬರುವಾಗ ಕಪ್ಪು ಹಂಚಿನ ಮನೆ ಮತ್ತು ಹಿತ್ತಲಿನ ಜಾಗ ಇರುವುದಿಲ್ಲ ಹಾಗೂ ಅದು ಪ್ರತಿವಾದಿಗಳ ಕಂದಾಯ ಜಮೀನು ಎಂದರೆ ಸರಿಯಲ್ಲ. 1975 ರಲ್ಲಿ ನನ್ನ ಮುತ್ತಜ್ಜಿ ಖರೀದಿ ಮಾಡಿರುತ್ತಾರೆ. ದಿನಾಂಕ ನನಗೆ ಗೊತ್ತಿಲ್ಲ.

ಪ್ರತಿವಾದಿಗಳಿಗೆ ಬಾಡಿಗೆಯನ್ನು ಕೊಡುತ್ತಿಲ್ಲ ಎಂದರೆ ನಾವು ಬಾಡಿಗೆಗೆ ಪಡೆದಿರುವುದಿಲ್ಲ. ಮೊದಲು ಬಾಡಿಗೆ ಕೊಡುತ್ತಿದ್ದೇವು ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಅನುಭವಕ್ಕೆ ಬಂದಾಗ ಪ್ರತಿವಾದಿಗಳಿಗೆ ಬಾಡಿಗೆಗೆ ಕೊಡುತ್ತಿದ್ದೇವು ಆದರೆ ಈಗ ಅವರ ಮೇಲೆ ದೌರ್ಜನ್ಯ ಮಾಡಿ ಬಾಡಿಗೆ ಕೊಡುತ್ತಿಲ್ಲ ಎಂದರೆ ಸರಿಯಲ್ಲ. ಬಾಡಿಗೆ ವಿಚಾರ ನನ್ನ ಹಿರಿಯರಿಗೆ ಬಿಟ್ಟರೆ ನನಗೆ ಗೊತ್ತಿಲ್ಲ ಎಂದರೆ ನನ್ನ ತಂದೆ ತಾಯಿ ಮತ್ತು ಹಿರಿಯರು ಹೇಳಿದಂತೆ ಬಾಡಿಗೆ ವಿಚಾರ ಇರುವುದಿಲ್ಲ. ನನ್ನ ತಂದೆ ತಾಯಿರವರು ಪ್ರತಿವಾದಿಗಳಿಗೆ ಬಾಡಿಗೆ ಕೊಡುತ್ತಿದ್ದರು ಎಂದರೆ ಸರಿಯಲ್ಲ.

ಪಹಣಿ ಸರಿಪಡಿಸಿಕೊಳ್ಳುವುದಕ್ಕೆ ನಾವು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ನಾವು ಖಾತೆಯ ಆಸ್ತಿಯನ್ನು ದಾವೆ ಸಲ್ಲಿಸಿದ್ದೇವೆ. ದಾವಾ ಆಸ್ತಿಗೆ ಕಂದಾಯ ದಾಖಲೆಗಳು ಇರುವುದಿಲ್ಲ. ಅಯಾತ್ ಸಾಬ್ ರವರ 2 ಗುಂಟೆ ಜಾಗ ನಮಗೆ ಗೊತ್ತಿಲ್ಲ ಎಂದರೆ ಅವರ ಜಾಗದಲ್ಲಿ ನಾವು ಇದ್ದೇವೆ. ಸದರಿ 2 ಗುಂಟೆ ಜಾಗದ ದಾಖಲೆ ಇಲ್ಲ ಎಂದರೆ ಅಯಾತ್ ಸಾಬ್ ರವರ ಖರೀದಿಯ ಪತ್ರ ಇದೆ. 2 ಗುಂಟೆ ಜಾಗದ ನಕ್ಷೆ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂತಹ ನಕ್ಷೆಯನ್ನು ಹಾಜರು ಪಡಿಸಿಲ್ಲ. ಆಯಾತ್ ಸಾಬ್ ರವರ 2 ಗುಂಟೆ ಜಮೀನು ಮತ್ತು ದಾವಾ ಆಸ್ತಿಯ ಎರಡು ಗುಂಟೆ ಜಮೀನಿನ ಚಕ್ಕುಬಂದಿಗೆ ತಾಳೆ ಬರುವುದಿಲ್ಲ ಎಂದರೆ ಸರಿಯಲ್ಲ.

ನೊಂದಣಿ ಸಂಖ್ಯೆ 7241/1976 - 77 ರ ಕ್ರಯಪತ್ರದಲ್ಲಿ ಚಕ್ಕಬಂದಿಯಲ್ಲಿ ತೋರಿಸಿರುವ ಅಯಾತ್ ಸಾಬ್ ರವರು ದಕ್ಷಿಣಕ್ಕೆ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಆದ ಕಾರಣ ಅಯಾತ್ ಸಾಬ್ ರವರನ್ನು ನಮ್ಮ ಚಕ್ಕುಬಂದಿಯಲ್ಲಿ ತೋರಿಸಿದ್ದೇವೆ ಎಂದರೆ ಅವರ ಕ್ರಯಪತ್ರದಲ್ಲಿ ಪೂರ್ವಕ್ಕೆ ನನ್ನ ಮುತ್ತಾತ ಚಿಕ್ಕನರಸಯ್ಯನವರ ಜಮೀನು ಎಂದು ನಮೂದು ಇದೆ. ಸಾಕ್ಷಿ ಮುಂದುವರೆದು 1975-76 ರಲ್ಲಿ ಕಾಳಯ್ಯನವರು 33 ಗುಂಟೆ ಕ್ರಯಕ್ಕೆ ಪಡೆದಿದ್ದು, 2004 ರಲ್ಲಿ 2 ಗುಂಟೆ ಆಸ್ತಿಯನ್ನು ಮಾರಾಟ ಮಾಡಿ ಉಳಿದ 31 ಗುಂಟೆ ಬದಲಿಗೆ 34 ಗುಂಟೆ ಎಂದು ಪಹಣಿ ಮಾಡಿಸಿಕೊಂಡಿರುತ್ತಾರೆ. ನಾನು ಸುಳ್ಳು ಹೇಳುತ್ತಿದ್ದು

2 ಗುಂಟೆ ಜಮೀನು ಪ್ಯಾರೆಜಾನ್ ಬಿನ್ ಮೊಹಮ್ಮದ್ ಉಮರ್ ರವರ ಹೆಸರಿಗೆ ಖಾತೆ ಯಾಗಿದೆ ಎಂದರೆ ಸರಿಯಲ್ಲ. 3 ಗುಂಟೆ ಹಿಡಿಕರಣ ಆಗದೆ ಇದ್ದ ಕಾರಣ ಅದನ್ನು ಸೇರಿಸಿ ಕಾಳಯ್ಯನವರು ಖಾತೆ ಮಾಡಿಸಿಕೊಂಡಿರುತ್ತಾರೆ. ಕಾಳಯ್ಯನವರ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ.

ನಾನು ಹೇಳಿರುವ ಚಕ್ಕುಬಂದಿಯಲ್ಲಿ ಅಯಾತ್ ಸಾಬ್ ರವರ ಮಾಲೀಕತ್ವದ ಜಮೀನು ಎಂದು ಬರೆಸಿಲ್ಲ ಎಂದರೆ ಖರೀದಿ ಮಾಡಿದಾಗ ದಕ್ಷಿಣಕ್ಕೆ ಮಂಗಳಮ್ಮನವರು ಇದ್ದ ಕಾರಣ ಅವರ ಹೆಸರು ಬರೆಸಿದ್ದೇವೆ. ಭದ್ರಯ್ಯ ಬಿನ್ ಮುನಿಯಪ್ಪ ಹೇರೂರು ಗ್ರಾಮದ ಸರ್ವೆ ನಂ.66 ರಲ್ಲಿ 22 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಜಮೀನು ಇಲ್ಲದೆ ಇದ್ದ ಕಾರಣ ಸರ್ಕಾರದವರು ಗೋಮಾಳ ಜಮೀನಿನಲ್ಲಿ ಸದರಿ 22 ಗುಂಟೆ ಜಮೀನು ಕೊಟ್ಟಿರುತ್ತಾರೆ. ಸದರಿ ಜಮೀನು ದಾವಾ ಆಸ್ತಿಗೆ ಸಂಭಂದ ಇಲ್ಲದೆ ಇದ್ದ ಕಾರಣ, ಅದರ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸರ್ವೆ ನಂ.66 ರಲ್ಲಿ ಮನೆ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.66 ರಲ್ಲಿ ಮನೆಯ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಹಾಜರುಪಡಿಸಿರುವುದಿಲ್ಲ. ಬಹಳ ಹಿಂದೆ ಭದ್ರಮ್ಮ ದಾವಾ ಆಸ್ತಿಗೆ ಅನುಭವದಾರರು ಎಂದರೆ ಮಾಲೀಕರು. ಸದರಿ ಆಸ್ತಿಯ ವಿಸ್ತೀರ್ಣ 29X19 ಅಂದರೆ 551 ಚದರ ಅಡಿ ಗೆ ಮಾತ್ರ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 40X61 ಜಾಗಕ್ಕೆ ಕಂದಾಯ ಕಟ್ಟುತ್ತಿದ್ದರು. ಪ್ರತಿವರ್ಷ ರೂ.200 ಅಥವಾ ರೂ.300 ಕಟ್ಟುತ್ತಿದ್ದರು. 40X61 ಜಾಗಕ್ಕೆ ನಿರ್ದಿಷ್ಟವಾದ ತೆರಿಗೆ ಇರುತ್ತದೆ ಎಂದರೆ ಸರಿ. ಕೆಲವೊಮ್ಮೆ 2 ಅಥವಾ ಮೂರು ವರ್ಷಕ್ಕೆ ತೆರಿಗೆ ಕಟ್ಟಿದ್ದೇವೆ. ಬಹಳ ಹಿಂದಿನಿಂದ ಒಂದೇ ಖಾತೆ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಂತರದಲ್ಲಿ 2 ಖಾತೆ ಆಗಿರುತ್ತದೆ. 2 ಖಾತೆ ಆಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. 2 ಗುಂಟೆ ಜಾಗ ಖರೀದಿ ಮಾಡಿದ್ದು, ನಾವು ಪೂರ್ಣ 40X61 ಜಾಗದಲ್ಲಿ ಇದ್ದೇವೆ. ಭದ್ರಮ್ಮನವರು ದಾವಾ ಆಸ್ತಿಯಲ್ಲಿ ಬಾಡಿಗೆದಾರರು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಬಾಯಿ ಮಾತಿನಲ್ಲಿ ಬಾಡಿಗೆಗೆ ಕೊಟ್ಟಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಹನುಮಪ್ಪನ ತಂದೆ ತಾಯಿ ಭದ್ರಮ್ಮ ಮತ್ತು ಲಕ್ಷ್ಮಮ್ಮ ಅಲ್ಲ ಆದರೆ ನಾನು ಸುಳ್ಳು ವಂಶವೃಕ್ಷ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಾನು ತಾಲ್ಲೂಕು ಕಛೇರಿಯ ಧೃಡಿಕೃತ

ವಂಶವೃಕ್ಷವನ್ನು ಹಾಜರುಪಡಿಸಿಲ್ಲ. ನೊಂದಣಿ ಸಂಖ್ಯೆ 7421/1976-77 ರ ಕ್ರಯಪತ್ರದ ಚಕ್ಕುಬಂದಿ ಮತ್ತು ದಾವಾ ಆಸ್ತಿಯ ಚಕ್ಕುಬಂದಿಗೆ ತಾಳೆ ಬರುವುದಿಲ್ಲ ಎಂದರೆ ಸರಿಯಲ್ಲ. ಅಯಾತ್ ಸಾಬ್ ?ರವರು 2 ಗುಂಟೆ ಕ್ರಯಕ್ಕೆ ಮಾರಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಯಾತ್ ಸಾಬ್ ರವರು ರೂ.100 ಕ್ಕೆ ಖರೀದಿ ಮಾಡಿದ್ದ ಜಮೀನನ್ನು ರೂ.90 ಗೆ ಮಾರಾಟ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಋಣಭಾರ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

(Further cross examination deferred at the request of counsel for the defendant No.1 to 8.)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi